ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿಡಿಮನೆ ನಾಗರಾಜ್

೧೧ನೇ ವರ್ಷ ೭ನೇ ಸಂಚಿಕೆ ಬೆಲೆ ೬೦ ಪೈಸೆ

ಕೊಪ್ಪ ೧೭-೨-೧೯೯೧ ಭಾನುವಾರ ದೂರವಾಣಿ : ೧೧೪

ಶೃಂಗೇರಿ ಹೊಳೆಯಲ್ಲಿ ಶಿವರಾತ್ರಿಯಂದು ಮೈಲುತುತ್ತ ಹಾಕಿ ಮೀನು ಹಿಡಿದ ಗುಲ್ಲು

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ : ಶಿವರಾತ್ರಿಯಂದು ರಾತ್ರಿ ಕೆಲವರು ಇಲ್ಲಿನ ಹಳೇ ಸ್ಮಶಾನದ ಕೆಳಗೆ ಹೊಳೆಯಲ್ಲಿ ಡೈನಮೈಟ್ ಹಾಕಿ ಮೀನು ಹಿಡಿದಿದ್ದು, ಮಠದ ಹೊಳೆಯ ಮೀನುಗಳನ್ನು ಹಿಡಿದಿರುವುದಾಗಿ ದೊಡ್ಡ ಗುಲ್ಲು ಹರಡಿದೆ.

"ಮಠದ ಹೊಳೆಯ ಭಾರಾ ಮೀನನ್ನೂ ಹಿಡಿದು ಬಿಟ್ಟಿದ್ದಾರಂತೆ; ಎಲ್ಲೋ ಹತ್ತಿಪ್ಪತ್ತು ಮೀನುಗಳು ಮಾತ್ರ ಉಳಿದಿವೆಯಂತೆ" ಎಂಬುದಾಗಿ ಊರ ತುಂಬ ಹಬ್ಬಿದ್ದ ಗುಲ್ಲು, ಪರಿಶೀಲನೆಯಿಂದ [illegible] ಎಂದು ಕಂಡು ಬಂತು.

ಮಠದ ಬಳಿಯಿರುವುದು 'ಹಕ್ಕು' ಮೀನುಗಳಾಗಿದ್ದು, ಇವರು ಹಿಡಿದುದು 'ಕರಿ' ಮೀನುಗಳು ಎಂಬುದೂ ತಿಳಿದು ಬಂದಿದೆ. ಅಲ್ಲದೆ ಮೈಲುತುತ್ತವನ್ನು ಮಠದ ಸಮೀಪ ಪ್ರದೇಶಕ್ಕಿಂತಲೂ ಕೆಳಗೆ ಗಾಂಧಿ ಮೈದಾನದ ಬಳಿ ಕೆಲವರು ಹಾಕಿದ್ದರೆಂದೂ, ೧೩ ರಂದು ಸ್ಮಶಾನದ ಬಳಿ ಕೆಲವು ಮೀನುಗಳು ಬಳಲಿ ಗುಂಪು ಕೂಡಿರುವುದನ್ನು ತಿಳಿದ ಇಲ್ಲಿಯ ಕೆಲ ಮಂದಿ (ಪ್ರತಿಷ್ಠಿತರು) ಡೈನಮೈಟ್ ಹಾಕಿಸಿ ಆ ಮೀನುಗಳನ್ನು ಹಿಡಿದರೆಂದೂ ಗೊತ್ತಾಗಿದೆ.

ಮಠದ ಬಳಿ ತುಂಗಾ ನದಿಯಲ್ಲಿ ಸಾವಿರಾರು ಸಂಖ್ಯೆಯಲ್ಲಿರುವ ಭಾರೀ ಗಾತ್ರದ ಮೀನುಗಳು ಒಂದು ಪ್ರವಾಸಿ ಆಕರ್ಷಣೆ ಸಹ ಆಗಿದ್ದು, ಅಲ್ಲಿ ಮೀನು ಹಿಡಿಯುವುದು ನಿಷಿದ್ಧವೆಂಬುದನ್ನು ಇಲ್ಲಿ ಸ್ಮರಿಸಬಹುದು.

[illegible] ಮೈಲುತುತ್ತವನ್ನು ಹೊಳೆಗೆ ಕದಡುವುದು ಹಾಗೂ ಡೈನಮೈಟ್ ಹಾಕುವುದು ಸಹ (ಮಠದ ಹೊಳೆಯಲ್ಲಿ ಮಾತ್ರವಲ್ಲ, ಎಲ್ಲ ಕಡೆಗೂ) ಕಾನೂನುಬಾಹಿರವಾಗಿದ್ದು, ಶಿವರಾತ್ರಿ ಹಾಗೂ [illegible] ಜಾತ್ರೆಗಳಲ್ಲಿ ಮಾತ್ರ ಈ ಪದ್ಧತಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದ್ದರೂ, ಈಚೆಗೆ ಇದು ಕಡಿಮೆಯಾಗುತ್ತಿದೆ.

ಆದರೂ ಆಗೊಮ್ಮೆ ಈಗೊಮ್ಮೆ ಇಂಥ ಪ್ರಕರಣ ನಡೆಯುತ್ತಿದ್ದು, ಮುಂದಿನ ಶಿವರಾತ್ರಿಯಂದು ಹೀಗಾಗದಂತೆ ಅಧಿಕಾರಿಗಳಾಗಲಿ, ಅರಣ್ಯ ಇಲಾಖೆಯವರಾಗಲಿ, ಪೊಲೀಸರಾಗಲಿ ಮುಂಜಾಗ್ರತೆ ವಹಿಸುವುದು ಒಳ್ಳೆಯದು.

ಮುಂದುವರಿದ ಶಂಕರ್ ಸಾರಿಗೆ ಬೀಗ ಮುದ್ರೆ :

ಕಾರ್ಮಿಕರ ಸಹಕಾರಿ ಸಾರಿಗೆ ಸಂಸ್ಥೆ ಸ್ಥಾಪನೆ

ಕೊಪ್ಪ : ಶಂಕರ್ ಸಾರಿಗೆ ಸಂಸ್ಥೆಯಲ್ಲಿ ಬೀಗಮುದ್ರೆ ಮುಂದುವರಿದಿದ್ದು, ಕಾರ್ಮಿಕರು 'ಟ್ರಾನ್ಸ್‌ಪೋರ್ಟ್ ಎಂಪ್ಲಾಯೀಸ್ ಕೋ-ಆಪರೇಟಿವ್ ಸೊಸೈಟಿ' ಎಂಬ ತಮ್ಮದೇ ಆದ ಸಾರಿಗೆ ಸಂಸ್ಥೆಯೊಂದನ್ನು ಸ್ಥಾಪಿಸಿದ್ದಾರೆ

ಈ ಸಂಸ್ಥೆಯು ನೋಂದಣಿ ಕಾರ್ಯ ನಡೆಯುತ್ತಿದ್ದು, ಕಾರ್ಮಿಕರಿಂದ ಮತ್ತು ಸಾರ್ವಜನಿಕರಿಂದ ತಲಾ ೧೦೦೦ ರೂ.ಗಳ ಶೇರುಗಳನ್ನು ಸಂಗ್ರಹಿಸಿ ಐದು ಬಸ್ಸುಗಳನ್ನು ಓಡಿಸುವ ಗುರಿ ಹೊಂದಿದೆ.

ಶಂಕರ್ ಸಾರಿಗೆಯವರು ತಮಗೆ ಬೇಡವೆಂದು ಜಿಲ್ಲಾ ಸಾರಿಗೆ ಪ್ರಾಧಿಕಾರಕ್ಕೆ ಬರೆದುಕೊಟ್ಟು ರದ್ದಾದ ೬ ಮಾರ್ಗಗಳ ಪರ್ಮಿಟ್‌ಗಳನ್ನು ಜಿಲ್ಲಾಧಿಕಾರಿಗಳು ಈಗಾಗಲೇ ಕಾರ್ಮಿಕರಿಗೆ ಮಂಜೂರು ಮಾಡಿದ್ದು, ಅವನ್ನೆಲ್ಲ ಕಾರ್ಮಿಕರ ಸಾರಿಗೆ ಸಂಸ್ಥೆ ಒಳಗೊಳ್ಳಲಿದೆ.

ಸಹಕಾರಿ ಸಂಘಕ್ಕೆ ಎ. ಎಸ್. ದಿವಾಕರ ಹೆಂಗಾರು ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿಗೆ ಇವರಲ್ಲದೆ ಬಿ. ಟಿ. ಚಂದ್ರಶೇಖರ್, ಬಿ. ಎಂ. ಕೃಷ್ಣಪ್ಪ, ವಿ. ರಮೇಶ್, ಚಿಕ್ಕೇಗೌಡ, ಎಂ. ಟಿ. ಟಿ. ಗೌಡ, ಎಸ್. ಆರ್. ರಾಮಚಂದ್ರ, ತಮ್ಮಣ್ಣಗೌಡ, ಬಿ. ಬಿ. ಜೆಕ್ಸೋರ್ ಆಯ್ಕೆಯಾಗಿದ್ದಾರೆ.

ಈ ಸಂಸ್ಥೆಯಲ್ಲಿ ಷೇರು ಹಣ ತೊಡಗಿಸಲು ಎ. ಐ. ಟಿ. ಯು. ಸಿ. ನೇತೃತ್ವದ ರಾಜ್ಯದ ಹಲವಾರು ಕಾರ್ಮಿಕ ಸಂಘಟನೆಗಳು ಮುಂದೆ ಬಂದಿದ್ದು, ರಾಜ್ಯ ರಸ್ತೆ ಸಾರಿಗೆ ಕಾರ್ಮಿಕರ ಸಂಘವೊಂದೇ ೫ ಲಕ್ಷ ರೂ.ಗೂ ಹೆಚ್ಚಿನ ಬಂಡವಾಳ ಹೂಡಲು ಮುಂದಾಗಿದೆ ಎಂದು ಕಾರ್ಮಿಕ ಮುಖಂಡ ಚಿಕ್ಕೇಗೌಡ ತಿಳಿಸಿದ್ದಾರೆ.

ಮಂಜೂರಾಗಿರುವ ಪರ್ಮಿಟ್‌ಗಳು : ಚಿಕ್ಕಮಗಳೂರು-ಕೊಪ್ಪ-ಶೃಂಗೇರಿ (ಬೆಳಗ್ಗೆ ೬-೧೦ಕ್ಕೆ), ೨) ಮಲ್ಲೇಶ್ವರ-ಶಿವಮೊಗ್ಗ, ೩) ಕೊಪ್ಪ-ಕೊಂಡದಖಾನ್, ೪) ಬೀರೂರು-ಶೃಂಗೇರಿ ಮತ್ತು ಶೃಂಗೇರಿ-ಬೀರೂರು (ಎದುರು ಬದುರು ಎರಡು ಬಸ್‌ಗಳು), ೫) ಬೀರೂರು-ಉಡುಪಿ ಹಾಗೂ ೬) ಮೇಗೂರು-ಕೊಪ್ಪ-ತೀರ್ಥಹಳ್ಳಿ (ಟೌನ್ ಸರ್ವಿಸ್).

ಈ ಮಧ್ಯೆ, ಮಾಲೀಕರಿಗೂ ಕಾರ್ಮಿಕ ಸಂಘಕ್ಕೂ ನಡುವೆ 'ನೂರನೆಯದೋ ನೂರೈವತ್ತನೆಯದೋ' ಎನ್ನುವಂಥ ಬಗೆಹರಿಯದ 'ಮಾತುಕತೆ'ಯ ಮತ್ತೊಂದು ಸಭೆ ಬೆಂಗಳೂರಲ್ಲಿ ಮತ್ತೆ ಏರ್ಪಾಡಾಗಿದೆ !

ಬೀಗದ ಕೈಗಳು ಸಿಕ್ಕಿವೆ

ಕೊಪ್ಪ ಜೀವವಿಮಾ ಕಛೇರಿಯೆದುರಿನ ರಸ್ತೆಯಲ್ಲಿ ಫೆಬ್ರವರಿ ೧೫ರ ರಾತ್ರಿ ಸಾರ್ವಜನಿಕರೊಬ್ಬರಿಗೆ ಸಿಕ್ಕಿರುವ ಮೂರು ಬೀಗದ ಕೈಗಳಿರುವ ಒಂದು ಗೊಂಚಲನ್ನು 'ಮುಂಜಾವು' ಕಾರ್ಯಾಲಯಕ್ಕೆ ತಲುಪಿಸಿದ್ದಾರೆ. ಕಳೆದುಕೊಂಡವರು ಗುರುತು ಹೇಳಿ ಪಡೆದುಕೊಳ್ಳಬಹುದು. —ಸಂ.

ಎಫ್.ಸಿ.ಎ. ಆಶ್ರಯದಲ್ಲಿ ೯ ದಿನಗಳ ಕಾಲ ಕೊಪ್ಪದಲ್ಲಿ ಕ್ರಿಕೆಟ್ ಸುಗ್ಗಿ

ಕೊಪ್ಪ: ಇಲ್ಲಿನ ಉತ್ತಮ ಕ್ರಿಕೆಟ್ ಕ್ಲಬ್‌ಗಳಲ್ಲೊಂದಾದ ಫ್ರೆಂಡ್ಸ್ ಕ್ರಿಕೆಟ್ ಅಸೋಸಿಯೇಶನ್ ಆಶ್ರಯದಲ್ಲಿ ಫೆ. ೨೮ರಿಂದ ಮಾ. ೮ ರವರೆಗೆ "ಲೋಕ ಸೇವಾ ನಿರತ ಎಂ. ಎಸ್. ದ್ಯಾವೇಗೌಡ ಸ್ಮಾರಕ" ಅಂತರ ಜಿಲ್ಲಾ ಮಟ್ಟದ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ.

ಈ ಟೂರ್ನಿಯಲ್ಲಿ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹೆಸರಾಂತ ತಂಡಗಳು ಭಾಗವಹಿಸಲಿವೆ ಎಂದು ತಂಡದ ಪ್ರಕಟಣೆ ತಿಳಿಸಿದೆ.

ಆಯುರ್ವೇದ ಕಾಲೇಜಿನ ವಿಚಾರದಲ್ಲಿ ಕೊಳಕು ಬೆಳವಣಿಗೆ ?

ಕೊಪ್ಪ : ಇಲ್ಲಿನ ಕಾಲೇಜನ್ನು ಇಲ್ಲೇ ಉಳಿಸಿಕೊಳ್ಳಬೇಕೆಂದು ಸಾರ್ವಜನಿಕರೂ, ಶಿವಮೊಗ್ಗಕ್ಕೆ ಸ್ಥಳಾಂತರಗೊಳ್ಳಲೆಂದು ವಿದ್ಯಾರ್ಥಿಗಳೂ ನಡೆಸಿರುವ ಪ್ರಯತ್ನಗಳು ಯಾವೋ ಕೊಳಕು ರೂಪ ಪಡೆಯುವ ಚಿಹ್ನೆಗಳು ಕಂಡು ಬಂದಿವೆ.

೯ ರಂದು ರಾತ್ರಿ ಯಾರೋ ಕೆಲವರು ಆಯುರ್ವೇದ ಕಾಲೇಜಿನ ಹಿಂಭಾಗದಲ್ಲಿರುವ ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ಹೋಗಿ ಗಾಜುಗಳನ್ನೂ ಮಾಡಿನ ಹಂಚುಗಳನ್ನೂ ಕಲ್ಲು ಹೊಡೆದು ಒಡೆದು ಹಾಕಿ ಗಲಾಟೆ ಮಾಡಿದ್ದಾರೆನ್ನಲಾಗಿದೆ.

ಅಂದು ಪ್ರಿನ್ಸಿಪಾಲರು ಮತ್ತು ನೆರೆಯಲ್ಲೇ ವಾಸಿಸುವ ಶಂಕರ್ ಸಂಸ್ಥೆಯ ಕಾಂಟ್ರಾಕ್ಟರು—ಇವರಿಬ್ಬರೂ ಊರಲ್ಲಿಲ್ಲದಿದ್ದುದು ಹಾಗೂ ಇನ್‌ಚಾರ್ಜ್ ಆಗಿದ್ದ ಪಿ. ಎಸ್. ಹೆಗಡೆಯವರ ಮನೆ ಪೇಟೆಯಲ್ಲಿರುವುದು—ಈ ಎರಡೂ ಅಂಶಗಳನ್ನು ಈ ಕೃತ್ಯವೆಸಗಿದವರು ಬಳಸಿಕೊಂಡಿದ್ದಾರೆ.

ಹಾಗೆಯೇ, ಶ. ರಾ. ಸು. ರಸ್ತೆಯಲ್ಲಿ ವಿದ್ಯಾರ್ಥಿಗಳು ವಾಸಿಸುತ್ತಿರುವ ಮನೆಗೆ ಮಧ್ಯಾಹ್ನ ೩ ಗಂಟೆಯ ಹೊತ್ತಿನಲ್ಲಿ ಇಂತದೇ 'ಯಾರೋ ಕೆಲವರು' ಹೋಗಿ ಗಾಜು ಒಡೆದು ಬೀಗವನ್ನೂ ಚಿಲಕವನ್ನೂ ಮುರಿದಿರುವುದಾಗಿಯೂ ಕೇಳಲಾಗಿದೆ. ಅವರೆ ಪೋಲೀಸರಿಗೆ [illegible] ವಿಷಯ ತಿಳಿದು ಪೋಲೀಸರೇ ಹೋಗಿ ಪರಿಶೀಲಿಸಿ ತುಂಬಾ ಸಂಶಯ ವ್ಯಕ್ತಪಡಿಸಿದ್ದಾರೆ.

ಇದರಿಂದ ಭೀತಿಗೊಂಡ ಅನೇಕ ವಿದ್ಯಾರ್ಥಿನಿಯರು ತಮ್ಮ ಊರುಗಳಿಗೆ ಹೊರಟು ಹೋಗಿದ್ದಾರೆಂದು ತಿಳಿದು ಬಂದಿದೆ.

ಈ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಆರೋಪ-ಪ್ರತ್ಯಾರೋಪ ಮಾಡಿಕೊಂಡಿದ್ದಾರೆ. ಪ್ರತಿಷ್ಠೆ, ಹಠಗಳು ಮೇಲೆ ನಿಂತು ಇಂಥ 'ಬೆಳವಣಿಗೆ'ಗಳ ತನಕ ನಿಲ್ಲುವುದು ಎಲ್ಲರಿಗೂ ಒಳ್ಳೆಯದು, ಊರಿಗೂ ಸಹ.

ಪ್ರಗತಿ

ಇತ್ತ, ಕಳೆದ ವಾರದ ಸಭೆಯ ನಂತರ, ಆಯುರ್ವೇದ ಆಸ್ಪತ್ರೆಯ [illegible] [illegible] ೧೩, [illegible] [illegible] [illegible] ಅದಕ್ಕೆ [illegible] ಪ್ರಾಸ್ಥಿಕ [illegible] [illegible] ಗೊತ್ತಾಗಿದೆ.

ಕೊಪ್ಪದಲ್ಲಿ ಯಶಸ್ವಿ ವಿಚಾರ ಸಂಕಿರಣ :

"ಮಂದಿರ-ಮಸೀದಿ ವಿವಾದ ಪಟ್ಟಭದ್ರ ಹಿತಾಸಕ್ತಿಗಳ ಸೃಷ್ಟಿ"

೧೯೪೯-೯೦ರ ವರ್ಷಗಳುದ್ದಕ್ಕೂ ದೇಶಾದ್ಯಂತ ಸಾವಿರಾರು ಮಂದಿಯನ್ನು ಬಲಿ ತೆಗೆದುಕೊಂಡ ರಾಮ ಜನ್ಮ ಭೂಮಿ-ಬಾಬ್ರಿ ಮಸೀದಿ ವಿವಾದ ನಮ್ಮ ದೇಶದ ಜನ ಸಾಮಾನ್ಯರ ಬದುಕಿಗೆ ಯಾವ ರೀತಿಯಲ್ಲೂ ಸಂಬಂಧಪಟ್ಟ ವಿಷಯವಲ್ಲ. ಅದೊಂದು ಐತಿಹಾಸಿಕ ಸಮಸ್ಯೆಯೂ ಅಲ್ಲ. ದೇಶದ ದೊಡ್ಡ ಬಂಡವಾಳ ಶಾಹಿಗಳು ಮತ್ತು ಇತರ ಪಟ್ಟಭದ್ರ ಹಿತಾಸಕ್ತಿಗಳಿಂದ ಕೂಡಿದ ಆಳುವ ವರ್ಗದ ಒಂದು ಗುಂಪು ತನ್ನ ಹಿತಾಸಕ್ತಿಯನ್ನು ವಿಶೇಷವಾಗಿ ಬೆಳೆಸಬಲ್ಲ ರಾಜಕೀಯ ಪಕ್ಷವೊಂದನ್ನು ಅಧಿಕಾರಕ್ಕೆ ತರಲು ಜನತೆಯ ಭಾವನಾತ್ಮಕ ಸಹೃದಯತೆಯನ್ನೂ ಮುಗ್ಧತೆಯನ್ನೂ ದುರುಪಯೋಗಪಡಿಸಿಕೊಳ್ಳುತ್ತಿರುವುದಷ್ಟೇ ಈ ವಿದ್ಯಮಾನ-ಎಂಬ ಒಟ್ಟಭಿಪ್ರಾಯ ಇಲ್ಲಿ ಫೆ. ೧೨ ರಂದು ನಡೆದ "ಅಯೋಧ್ಯೆ ಮತ್ತು ಮಂದಿರ-ಮಸೀದಿ ವಿವಾದ" ಕುರಿತ ವಿಚಾರ ಸಂಕಿರಣದಲ್ಲಿ ಮೂಡಿಬಂದಿತು.

'ಅಯೋಧ್ಯೆ : ಕೆಲವು ಐತಿಹಾಸಿಕ ಸಂಗತಿಗಳು' ಈ ಕುರಿತು ವಿಚಾರ ಮಂಡಿಸಿದ ಕುವೆಂಪು ವಿ. ವಿ ಇತಿಹಾಸ ವಿಭಾಗದ ಉಪನ್ಯಾಸಕ ಡಾ|| ರಾಜಾರಾಮ ಹೆಗಡೆಯವರು, ಈ ಸಮಸ್ಯೆ ಹುಟ್ಟಿಕೊಂಡ ಹಿನ್ನೆಲೆಗಳನ್ನು ವಿವರಿಸುತ್ತ, ರಾಮ ಒಬ್ಬ ಐತಿಹಾಸಿಕ ವ್ಯಕ್ತಿ ಎನ್ನಲು ಯಾವ ಐತಿಹಾಸಿಕ ಪುರಾವೆಯೂ ಇಲ್ಲ. ರಾಮಾಯಣವೆಂಬ ಮಹಾ ಕಾವ್ಯದ ನಾಯಕ ಆತ. ರಾಮ ಐತಿಹಾಸಿಕ ವ್ಯಕ್ತಿಯಾಗಿದ್ದರೆ ಇತಿಹಾಸದ ಪುಸ್ತಕಗಳಲ್ಲಿ ಹಾಗೇ ಇರುತ್ತಿತ್ತು. ಆದರೆ ಯಾವುದೇ ಮೂರನೇ ದರ್ಜೆಯ ಇತಿಹಾಸ ಪುಸ್ತಕದಲ್ಲೂ ಕೂಡ ರಾಮ ಐತಿಹಾಸಿಕ ವ್ಯಕ್ತಿಯೆಂದು ಹೇಳಿಲ್ಲ ಎಂದರು.

ರಾಮ ದೇವಾಲಯಗಳು ಭಾರತದಲ್ಲಿ ರೂಪುಗೊಂಡದ್ದು ಕ್ರಿ. ಶ. ೯ನೇ ಶತಮಾನದ ನಂತರವೇ-ಮುಸ್ಲಿಮರು ಭಾರತಕ್ಕೆ ಬಂದ ನಂತರವೇ-ಎಂದು ಇತಿಹಾಸದ ಪುರಾವೆಯೊಂದಿಗೆ ವಿವರಿಸಿದ ಅವರು, 'ಹಿಂದೂ' ಎಂಬುದು ಸಿಂಧೂ ನದಿಯ ಈಚಿನ ಪ್ರದೇಶ ಮತ್ತು ಅಲ್ಲಿನ ಜನರನ್ನು ಗುರುತಿಸುವ ಒಂದು ಪ್ರದೇಶವಾಚಕ ಪದ ಮಾತ್ರ; ಅದನ್ನು ಒಂದು 'ಧರ್ಮ'ವನ್ನು ಸೂಚಿಸುವ ಪದವಾಗಿ ಬಳಸತೊಡಗಿದ್ದು ೧೯ನೇ ಶತಮಾನದ ಅಂತ್ಯದಲ್ಲಿ; ಅದರಲ್ಲೂ ೧೯೧೩ ರಲ್ಲಿ ಹುಟ್ಟಿದ ಹಿಂದೂ ಮಹಾಸಭಾದ ಮೂಲಕವೇ ಎಂದು ತಿಳಿಸಿದರು.

ಮತಾಂತರ, ದೇವಾಲಯಗಳ ನಾಶ ಅಥವಾ ಮಾರ್ಪಾಡು, ಧಾರ್ಮಿಕ ಕ್ರೌರ್ಯ ಮುಂತಾದುವೆಲ್ಲ ರಾಜಶಾಹಿ ಯುಗದ ಎಲ್ಲ ಕಾಲಗಳಲ್ಲೂ ನಡೆದಂಥವು; ಕೇವಲ ಮುಸ್ಲಿಮರಿಗೆ ಮಾತ್ರ ಸೀಮಿತವಲ್ಲ ಭಾರತದಲ್ಲೇ ಹಿಂದೂ ರಾಜ್ಯಗಳ ನಡುವೆಯೂ ಇಂಥವು ಶತಮಾನಗಳ ಕಾಲ ನಡೆದಿವೆ ಎಂಬ ವಿಚಾರವನ್ನೂ ಡಾ|| ಹೆಗಡೆ ತಿಳಿಸಿದರು.

ಭಾರತದಲ್ಲಿ ಮೊದಲಿಗೆ ಬ್ರಿಟಿಷರ "ಒಡೆದು ಆಳುವ ನೀತಿ"ಯ ಅಂಗವಾಗಿ ಹುಟ್ಟಿಕೊಂಡ ಈ ಮಂದಿರ-ಮಸೀದಿ ಸಮಸ್ಯೆ, ಮುಂದೆ ಜನತೆಯ ಜೀವನ ದುರ್ಭರವಾಗಿ, ಆಳುವ ವರ್ಗಗಳಿಗೆ ಪ್ರತಿಭಟನೆ ಎದುರಾದ ಅವಧಿಯಲ್ಲೆಲ್ಲ ಹಿಂದೂ-ಮುಸ್ಲಿಂ ಎರಡೂ ಕಡೆಯ ಮತೀಯ ಶಕ್ತಿಗಳಿಗೆ ಚಿಗುರಿ ಬೆಳೆಯಲು ಅವಕಾಶ ದೊರೆತು ಮತ್ತೆ ಮತ್ತೆ ಉಲ್ಬಣಿಸಿದೆ ಎಂಬುದನ್ನು ೧೯೪೭-೪೮, ೧೯೬೦-೭೦ ಹಾಗೂ ೧೯೭೭ರ ನಂತರ ಮತ್ತು ೧೯೮೫ರ ನಂತರದ ಅವಧಿಗಳನ್ನು ಉದಾಹರಿಸುವ ಮೂಲಕ ಪ್ರತಿಪಾದಿಸಿದರು.

"ಮಂದಿರ-ಮಸೀದಿ ವಿವಾದ ಮತ್ತು ಕೋಮು ಸೌಹಾರ್ದ" ಈ ವಿಚಾರವಾಗಿ ಮಾತನಾಡಿದ ಕುವೆಂಪು ವಿ. ವಿ. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ|| ಸದಾನಂದ ಅವರು, ಈ ವಿವಾದದಿಂದ ಪ್ರಾಣ ಮತ್ತು ಆಸ್ತಿ ಪಾಸ್ತಿ ಕಳೆದುಕೊಂಡವರೆಲ್ಲ ಎರಡೂ ಕಡೆಯ ಬಡ ದುಡಿವ ಜನತೆಯೇ ಎಂಬುದನ್ನು ಉದಾಹರಣೆಗಳ ಸಹಿತ ವಿವರಿಸಿದರು.

"…. 'ರಥಯಾತ್ರೆ' ಅಥವಾ 'ಇಟ್ಟಿಗೆ ಯಾತ್ರೆ'ಗಳ ಸಮಯದಲ್ಲಿ ಎಲ್ಲೂ ಗಲಭೆಯಾಗಿಲ್ಲ. ಆದ್ದರಿಂದ ಕೋಮು ಗಲಭೆಗಳಿಗೆ ಅವು ಕಾರಣವಲ್ಲ, ರಾಜಕೀಯ ಪಕ್ಷಗಳಷ್ಟೇ ಕಾರಣ .. " ಎಂಬ 'ಮಂದಿರವಾದಿಗಳ' ಪ್ರಚಾರವನ್ನು ವಿಶ್ಲೇಷಿಸಿದ ಅವರು, ಮೆರವಣಿಗೆಯ ವೇಳೆ, ಗಲಭೆಯಾಗದ ಮಾತ್ರಕ್ಕೆ ಆ ಸಮಯದ ಘೋಷಣೆಗಳು ಮತ್ತು ಪ್ರಚೋದನಕಾರಿ ವರ್ತನೆಗಳು ಎರಡೂ ಕಡೆಯ ಜನ ಸಾಮಾನ್ಯರ ಮನಸ್ಸುಗಳಲ್ಲಿ ಹುಟ್ಟು ಹಾಕುವ ಕಹಿ ಭಾವನೆ, ದ್ವೇಷ, ತಿರಸ್ಕಾರ, ರೋಷ ಇವನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ. ಮುಂದೆ ಅತ್ಯಂತ ಕ್ಷುಲ್ಲಕ ಕಾರಣಗಳೇ ನೆಪವಾಗಿ, ಹಿಂಸೆ ಭುಗಿಲೇಳುತ್ತಿದೆ ಎಂಬುದನ್ನು ಸಹ ವಿಷದವಾಗಿ ವಿವರಿಸಿದರು.

ಜೊತೆಗೆ, ರಾಜಕೀಯ ತಂತ್ರಗಾರರು ಸಹ ಇಂಥ ಸಿದ್ಧ ಪರಿಸ್ಥಿತಿಯನ್ನು ಲೀಲಾಜಾಲವಾಗಿ ಬಳಸಿಕೊಳ್ಳುತ್ತಾರೆ ಎಂದ ಅವರು, ಕರ್ನಾಟಕ ಮತ್ತು ಆಂಧ್ರದಲ್ಲಿ ವೀರೇಂದ್ರ ಪಾಟೀಲ್ ಮತ್ತು ಡಾ|| ಚೆನ್ನಾರೆಡ್ಡಿ ಮಂತ್ರಿ ಮಂಡಲಗಳನ್ನುರುಳಿಸಲು ಕೋಮು ಗಲಭೆಗಳನ್ನೇ ಉಂಟು ಮಾಡಲಾಯಿತೆಂದು ವಿವರಿಸಿದರು. ಇಂಥ ಯಾವುದೇ ರಥ ಯಾತ್ರೆಗಳು ನಡೆಯಲು ಅವಕಾಶ ದೊರೆಯದಿದ್ದ ತಮಿಳ್ನಾಡು, ಪ. ಬಂಗಾಲ ಮೊದಲಾದೆಡೆ ಕೋಮು ಗಲಭೆಗಳೇ ನಡೆಯಲಿಲ್ಲವೆಂಬುದನ್ನೂ ಡಾ|| ಸದಾನಂದ ಜ್ಞಾಪಿಸಿದರು.

ಇದೆಲ್ಲದರ ಒಟ್ಟು ತಾತ್ಪರ್ಯವೆಂದರೆ, ಜನತೆಯು ಪ್ರಸಕ್ತ ಬದುಕಿಗೆ ಸಂಬಂಧಪಡದ ಈ ವಿವಾದವನ್ನು ಕೈ ಬಿಟ್ಟು, ಇಡೀ ದೇಶದ ಎಲ್ಲಾ ಜನರ ಜೀವನ ಮಟ್ಟಸುಧಾರಿಸುವ ತುರ್ತು ಅಗತ್ಯದತ್ತ ಗಮನ ಹರಿಸಬೇಕು ; ಇತಿಹಾಸದಲ್ಲಿ ತಪ್ಪುಗಳಾಗಿದ್ದರೆ ಅವು ಮತ್ತೊಮ್ಮೆ ಆಗದಂತೆ ಅರಿವಿನಿಂದ ವರ್ತಿಸುವುದಷ್ಟೇ ಇತಿಹಾಸದಿಂದ ನಾವು ಕಲಿಯಬೇಕಾದ ಪಾಠ; ಇತಿಹಾಸದಲ್ಲಿ ಆದುದನ್ನೇ ಈಗ ಪ್ರತಿಯಾಗಿ ಮಾಡುವುದು ನಾಗರಿಕ ಸಮಾಜದ ನಡವಳಿಕೆಯಲ್ಲ-ಅದೊಂದು ಬರ್ಬರ ಸಮಾಜದ ವರ್ತನೆಯಾಗುತ್ತದೆ ಎಂದು ಡಾ|| ಸದಾನಂದ ಹೇಳಿದರು

ಶೃಂಗೇರಿಯ ಕಾಲೇಜು ಉಪನ್ಯಾಸಕ ಹಯವದನ ಉಪಾಧ್ಯ ವಿಚಾರ ಸಂಕಿರಣದ

(ಮುಂದಿನ ಪುಟಕ್ಕೆ)

ಆಂಧ್ರ ಪೋಲೀಸರಿಂದ 'ಗದ್ದರ್' ಬಂಧನ : ಶಿವಮೊಗ್ಗ ಕಾರ್ಯಕ್ರಮ ರದ್ದು;

ಬುಶ್, ಚಂದ್ರಶೇಖರ್, ಜನಾರ್ದನರೆಡ್ಡಿ ಪ್ರತಿಕೃತಿ ದಹನ

ಫೆ ೧೩ ರಂದು ಶಿವಮೊಗ್ಗದಲ್ಲಿ ಏರ್ಪಾಡಾಗಿದ್ದ ಆಂಧ್ರದ ಪ್ರಖ್ಯಾತ ನಕ್ಸಲೀಯ ಕಲಾವಿದ ಗದ್ದರ್‌ರವರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿಲ್ಲ. ತಮಿಳುನಾಡಿನಲ್ಲಿ ಕಾರ್ಯಕ್ರಮಗಳನ್ನು ನೀಡಲು ತೆರಳಿದ್ದ ಅವರನ್ನು ಅದರ ಮುಂಚಿನ ದಿನವಷ್ಟೇ ಆಂಧ್ರದ ಪೋಲೀಸರು ಅವರ ಮಾಮೂಲಿ '[illegible]ತೂರಿ' ಮೊಕದ್ದಮೆಯೊಂದರ ನೆಪದಲ್ಲಿ ಬಂಧಿಸಿದ್ದರು.

ಗದ್ದರ್ ಮತ್ತು ಅವರ ಜನ ನಾಟ್ಯ ಮಂಡಳಿಯ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದ್ದ 'ಪ್ರಗತಿ ಪರ ವಿದ್ಯಾರ್ಥಿ ಕೇಂದ್ರ'ದ (ಪಿವಿಕೆ) ವಿದ್ಯಾರ್ಥಿಗಳು ಗದ್ದರ್‌ರ ಬಂಧನವನ್ನು ವಿರೋಧಿಸಿ ಪ್ರತಿಭಟನಾ ಮೆರವಣಿಗೆಯನ್ನು ಶಿವಮೊಗ್ಗದಲ್ಲಿ ನಡೆಸಿದರು.

ಅದರ ಜೊತೆ ಜೊತೆಗೇ, ಕ್ಷುಲ್ಲಕ ಕಾರಣದ ಮೇಲೆ ಇರಾಕ್ ಮೇಲೆ ಯುದ್ಧ ಹೂಡಿ, ಅಂತರ ರಾಷ್ಟ್ರೀಯ ಮತ್ತು ವಿಶ್ವಸಂಸ್ಥೆಯ ನೀತಿ-ನಿಯಮಗಳಿಗೆ ವಿರುದ್ಧವಾಗಿ ಸಾವಿರಾರು ನಿರಪರಾಧಿ ನಾಗರಿಕರ ಮೇಲೆ ಉದ್ದೇಶಪೂರ್ವಕ ಬಾಂಬ್ ಸುರಿಮಳೆ ನಡೆಸುತ್ತಿರುವ ವಿಶ್ವ ಸಾಮ್ರಾಜ್ಯಶಾಹಿಯ ನೇತಾರ ಜಾರ್ಜ್ ಬುಶ್, ಈತನ ಕೈಗೊಂಬೆಯಾಗಿ ಭಾರತದ ಅಲಿಪ್ತ ನೀತಿಯನ್ನೇ ಗಾಳಿಗೆ ತೂರಿ ಭಾರತ ವಿಶ್ವದೆದುರು ತಲೆ ತಗ್ಗಿಸುವಂತೆ ಮಾಡಿರುವ ದಲ್ಲಾಳಿ ಸರ್ಕಾರದ ಪ್ರಧಾನಿ ಚಂದ್ರಶೇಖರ್ ಹಾಗೂ ಆಂಧ್ರದಲ್ಲಿ ಹಳ್ಳಿಗಾಡಿನ ಬಡ ಜನಸಾಮಾನ್ಯರು ತಮ್ಮ ಉಳಿವಿಗಾಗಿ ನಡೆಸುತ್ತಿರುವ ತೀವ್ರ ಹೋರಾಟಗಳನ್ನು ನಕ್ಸಲ್‌ವಾದಿ ಎಂದು ಕರೆದು ದಮನ ಯಂತ್ರವನ್ನು ಹರಿಯಬಿಟ್ಟಿರುವ ಮುಖ್ಯ ಮಂತ್ರಿ ಜನಾರ್ದನ ರೆಡ್ಡಿ-ಇವರುಗಳ ಪ್ರತಿಕೃತಿಗಳನ್ನೂ ಮೆರವಣಿಗೆಯಲ್ಲಿ ಕೊಂಡೊಯ್ದು, ಸುಡಲಾಯಿತು. ಮೆರವಣಿಗೆಯಲ್ಲಿ ಇವರ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು.

ಪ್ರತಿಕೃತಿ ದಹನದ ನಂತರ ನೆರೆದಿದ್ದ ಸುಮಾರು ೩೦೦-೪೦೦ ಜನ ನಾಗರಿಕರನ್ನು ಉದ್ದೇಶಿಸಿ ಮಾತನಾಡಿದ ಪಿವಿಕೆ ಶಿವಮೊಗ್ಗ ಜಿಲ್ಲಾ ಘಟಕದ ಕಾರ್ಯದರ್ಶಿ ಮಂಜುನಾಥ್ ಅವರು ಬುಶ್, ಚಂದ್ರಶೇಖರ್ ಮತ್ತು ಜನಾರ್ದನ ರೆಡ್ಡಿಯನ್ನು ಉಗ್ರವಾಗಿ ಖಂಡಿಸಿದರು.

ಇಂದಿರಾ ಗಾಂಧಿಯ ಹತ್ಯೆಯಾದಾಗ ಸಾವಿರಾರು ಮುಗ್ಧ ಸಿಖ್ಖರನ್ನು ಕಾಂಗ್ರೆಸ್ಸಿಗರು ರಾಜಾರೋಷವಾಗಿ ಕೊಂದರು, ಆಗ ಯಾರನ್ನೂ ಬಂಧಿಸಲಿಲ್ಲ. ಮಂದಿರ-ಮಸೀದಿ ವಿವಾದವನ್ನೆತ್ತಿ, 'ದೇಶದ ಐಕ್ಯತೆ-ಸಮಗ್ರತೆ' ಎಂಬ ಇವರ ಕುರುಡು ಮಂತ್ರಕ್ಕೂ ಕುತ್ತು ತಂದುದಲ್ಲದೆ ಅಡ್ವಾಣಿಯವರ ರಥ ಯಾತ್ರೆ, ಇಟ್ಟಿಗೆಯಾತ್ರೆಗಳೆಲ್ಲದರ ಪರಿಣಾಮವಾಗಿ ಸಾವಿರಾರು ಮುಗ್ಧ ಹಿಂದೂ-ಮುಸ್ಲಿಮರ ಪ್ರಾಣ ಹರಣವಾಯಿತು; ಆದರೆ ಅಡ್ವಾಣಿಯನ್ನಾಗಲಿ ಮತ್ತಾರನ್ನಾಗಲಿ ಬಂಧಿಸಲಿಲ್ಲ. ಮಂಡಲ್ ವರದಿ ವಿರೋಧಿಸಿ ಹತ್ತಾರು ಜನರನ್ನು ಬೆಂಕಿ ಹಚ್ಚಿ ಕೊಂದು, ಕೋಟ್ಯಾಂತರ ರೂ ಆಸ್ತಿ ಪಾಸ್ತಿ ನಷ್ಟ ಮಾಡಲಾಯಿತು; ಆಗಲೂ ಯಾರನ್ನೂ ಬಂಧಿಸಲಿಲ್ಲ ಎಂದು ಮಂಜುನಾಥ್ ಜ್ಞಾಪಿಸಿದರು.

ಗದ್ದರ್‌ರನ್ನು ಮಾತ್ರ ಬಂಧಿಸಿದ್ದಾರೆ, ಏಕೆ ? ಅವರು ಈ ದೇಶದ ದಲ್ಲಾಳಿ ಬಂಡವಾಳಶಾಹಿಗಳ ಮತ್ತು ದೊಡ್ಡ ಪಾಳೆಯಗಾರಿ ಭೂಸ್ವಾಮಿಗಳ ಆಳುವ ಕೂಟವನ್ನೂ, ಈ ಕೂಟವನ್ನು ಕೈಗೊಂಬೆಯಾಗಿ ಮಾಡಿಕೊಂಡು ಅವರ ಕೈಯಲ್ಲಿ ಈ ದೇಶ ಆಳಿಸಿ ನಮ್ಮ ಸಂಪತ್ತನ್ನೆಲ್ಲ ಲೂಟಿ ಹೊಡೆಯುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳನ್ನೂ ಹಳ್ಳಿಹಳ್ಳಿಗಳಲ್ಲಿ ಬಡಜನರೆದುರು ಬಯಲುಗೊಳಿಸುತ್ತಿದ್ದಾರೆಂತಲೆ ? ಈ ಶೋಷಣೆ, ದಬ್ಬಾಳಿಕೆಗಳ ವಿರುದ್ಧ ಸಿಡಿದೇಳುವಂತೆ ಜನರಿಗೆ ಅರ್ಥವಾಗುವ ಹಾಗೆ ಲಾವಣಿ ಕಟ್ಟಿ, ಗೆಜ್ಜೆ ಕಟ್ಟಿಕೊಂಡು ಕುಣಿದು ಜನರನ್ನು ಸಂಪೂರ್ಣ ವಿಮೋಚನೆಯ ರಾಜಿಯಿಲ್ಲದ ಹೋರಾಟಕ್ಕೆ ಎಚ್ಚರಿಸುತ್ತಿದ್ದಾರೆಂತಲೆ ?" ಎಂದು ಪ್ರಶ್ನಿಸಿದ ಮಂಜುನಾಥ್, ಇಂಥ ಬಂಧನ, ದಮನಗಳಿಂದೆಲ್ಲ ಜನತೆಯ ಹೋರಾಟಗಳನ್ನು ಹತ್ತಿಕ್ಕುವುದು ಸಾಧ್ಯವಿಲ್ಲ. ಜನರ ಮಾನವಂತ ಬದುಕಿನ ಆಶೋತ್ತರಗಳ ಈಡೇರಿಕೆಯಾಗುವವರೆಗೂ ಈ ಕ್ರಾಂತಿಕಾರಿ ಹೋರಾಟ ನಿಲ್ಲುವುದಿಲ್ಲ ಎಂದು ಘೋಷಿಸಿದರು.

ಶಿವಸುಂದರ್

ವೈಚಾರಿಕತೆಯನ್ನು ಅಳಿದ ವಿಚಾರ ಗೋಷ್ಠಿ

ಚಿಂತನ ಶೀಲನಾದ ಮನುಷ್ಯ, ಆ ಗುಣವನ್ನು ಸಂದರ್ಭಕ್ಕೆ ತಕ್ಕಂತೆ ಯಾವ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ ಎಂಬುದನ್ನು ಇತ್ತೀಚಿಗೆ ಕೊಪ್ಪದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ("ಅಯೋಧ್ಯೆ ಮತ್ತು ಮಂದಿರ–ಮಸೀದಿ ವಿವಾದ") ಕೆಲವರು ವರ್ತಿಸಿದ ರೀತಿಯು ಸ್ಪಷ್ಟವಾಗಿ ತೋರಿಸಿ ಕೊಟ್ಟಿದೆ

ಮನುಷ್ಯರು ಹಲವು ವಿಚಾರಗಳಲ್ಲಿ ಸಹಜವಾಗಿಯೇ ವಿಭಿನ್ನ ದೃಷ್ಟಿ ಕೋನಗಳನ್ನು ಹೊಂದಿರುತ್ತಾರೆ. ಇದು ಅವರವರ ಪರಿಸರ, ಚಿಂತನ ಶೀಲತೆ ಮುಂತಾದುವನ್ನು ಅವಲಂಬಿಸಿರುತ್ತದೆ. ಆದರೆ ತನ್ನ ನಂಬಿಕೆಗೇ ಇತರರೂ ಬದ್ಧರಾಗಿರಬೇಕೆನ್ನುವುದು ಬಾಲಿಶತನವಾದೀತು. ಭಿನ್ನಾಭಿಪ್ರಾಯಗಳಿರುವ ವಿಚಾರವೊಂದರ ಬಗ್ಗೆ ಹಲವರು ಒಟ್ಟು ಸೇರಿ ಮಾತನಾಡುವಾಗ ತಾಳ್ಮೆ ಮತ್ತು ಸ್ಥಿಮಿತ ಬಹಳ ಮುಖ್ಯ. ತನ್ನ ವಿಶ್ವಾಸಕ್ಕೆ ವಿರುದ್ಧವಾದ ಅಭಿಪ್ರಾಯ ಬಂದಲ್ಲಿ, ಅದು ಹೇಗೆ ಸರಿಯಲ್ಲ ಎಂದು ಸಕಾರಣವಾಗಿ ಸಮರ್ಥಿಸಬೇಕೇ ವಿನಃ "ಇಂತಹ ಮಾತನ್ನು ನೀವು ಆಡಬಾರದು; ನಮಗೆ ಸಹಿಸಲು ಸಾಧ್ಯವಾಗುವುದಿಲ್ಲ" ಎಂದು ನಿರ್ಬಂಧಿಸುವುದು ವಿಚಾರಗೋಷ್ಠಿಯಾಗುವುದಿಲ್ಲ ಬದಲಾಗಿ ಅದರಿಂದ ಹೊಯ್ಕೈಗೆ ಆಸ್ಪದವಾಗುತ್ತದೆ ಅಷ್ಟೇ.

ಒಂದು ವೇಳೆ ತಮ್ಮ ವಿಚಾರವನ್ನು ಸಮರ್ಥಿಸಿ ಭಾಷಣ ಮಾಡಲು ಅವಕಾಶ ಸಿಗದಿದ್ದರೂ ಸಹ, ಪ್ರಶ್ನೋತ್ತರದ ಅವಕಾಶದಲ್ಲೇ ಸಭಿಕರು ತಮ್ಮ ಅಭಿಪ್ರಾಯವನ್ನು ಸಮರ್ಥವಾಗಿ ಮಂಡಿಸಲು ಸಾಧ್ಯವಿದೆ. ಆದೇ—ತಾಳ್ಮೆ ಮತ್ತು ತಮ್ಮ ಅಭಿವ್ಯಕ್ತಿಯಲ್ಲಿ ಸ್ಥಿಮಿತ ಬೇಕು; ಉದ್ರೇಕದಿಂದ ಇದಾಗುವಂಥದಲ್ಲ, ಅಷ್ಟೇ.

ದೇಶದ ಮುಂದೆ, ಒಂದು ಸಮಸ್ಯೆ ಎದುರಾದಾಗ (ಅದು ವಿವಾದಾಸ್ಪದವಾಗಿರಲಿ, ಅಲ್ಲದೇ ಇರಲಿ), ಅದನ್ನು ಅತ್ಯಂತ ನಿರ್ಮಲ ಮನಸ್ಸಿನಿಂದ, ದೇಶಕ್ಕೆ ಹಿತಕರವಾಗುವ ರೀತಿಯಲ್ಲಿ ಬಗೆಹರಿಸಲು ಪ್ರಯತ್ನಿಸಬೇಕು. ಆದರೆ ಇಂದು ನಮ್ಮ ಮುಂದೆ ನಡೆಯುತ್ತಿರುವುದನ್ನು ನೋಡಿದರೆ, ಇಂದು–ನಾಳೆಯೊಳಗೇ ಮನುಷ್ಯ "ಪ್ರಾಣಿ ವರ್ಗದಲ್ಲಿಯೇ ಶ್ರೇಷ್ಠ"ನೆಂಬ ಪದವಿಯನ್ನು ಬಿಟ್ಟುಕೊಡಬೇಕಾಗಿ ಬರುವುದೋ ಏನೋ? ಏಕೆಂದರೆ, ಆತನ ವೈಚಾರಿಕ ದಿಗಂತ ಸಂಕುಚಿಸುತ್ತಿದೆ, ಗುಣಮಟ್ಟದಲ್ಲೂ ಕ್ಷೀಣಿಸುತ್ತಿದೆ. ತಾಳ್ಮೆ, ಅರಿವು ಕಡಿಮೆಯಾಗುತ್ತಿದೆ.

ಇದನ್ನು ಅಳಿದದ್ದೇ ಮೊನ್ನೆಯ ವಿಚಾರ ಸಂಕಿರಣದ ಒಂದು ಮಹತ್ವದ ಸಾಧನೆ ಎಂದರೆ ತಪ್ಪಾಗಲಿಕ್ಕಿಲ್ಲ.

—ರಘುಬೀರ್ ಅಡಮುದ',
ಸ್ನಾತಕೋತ್ತರ ಕೇಂದ್ರ, ದಾವಣಗೆರೆ.

ಧರ್ಮದ ಹೆಸರಿನಲ್ಲಿ ದರೋಡೆಯೆ?

ಪ್ರಿಯರೆ,

ಯಾವುದೇ ಸಾಮಾಜಿಕ ಅಥವಾ ಧಾರ್ಮಿಕ ಕಾರ್ಯಕ್ರಮಗಳು ನಡೆಯಬೇಕಾದರೂ ಸಾರ್ವಜನಿಕರ ಸಹಾಯ ಅಗತ್ಯ. ಹಾಗೇ ಇದಕ್ಕಾಗಿ ವಂತಿಗೆ ಸಂಗ್ರಹಿಸುವುದು ರೂಢಿಯಲ್ಲಿರುವ ಕ್ರಮ. ವಂತಿಗೆ ಎಂದರೆ ಸಂತೋಷವಾಗಿ ಕೊಟ್ಟಿದ್ದನ್ನು ಸ್ವೀಕರಿಸಿ, ಸಂಗ್ರಹಿಸುವುದಾಗಿದೆ. ಆದರೆ ಇಂದು 'ಒಳ್ಳೆಯ ಕಾರ್ಯ'ಗಳ ಹೆಸರಿನಲ್ಲಿ ಜನರನ್ನು ಸುಲಿಗೆ ಮಾಡುತ್ತಿರುವುದು ಎಲ್ಲೆಲ್ಲೂ ಕಂಡುಬರುತ್ತಿರುವ ಸಂಗತಿ.

ಈಗ ಕೊಪ್ಪ, ಶೃಂಗೇರಿ, ತಾ॥ ಗಳಲ್ಲಿ ಇದೇ ರೀತಿ ನಡೆಯುತ್ತಿದೆ. ಊರಿನ ದೊಡ್ಡ ಮನುಷ್ಯರೆನ್ನಿಸಿಕೊಂಡವರು (ಹಣದಲ್ಲಿ, ಹೆಸರಿನಲ್ಲಿ) ಹಾಗೂ ಜನಪ್ರತಿನಿಧಿಗಳು ಮನೆ ಮನೆಗೆ (ಮುಖ್ಯವಾಗಿ ಬ್ರಾಹ್ಮಣರ ಮನೆಗಳಿಗೆ.) ಹೋಗಿ ಒತ್ತಾಯ ಮಾಡಿ ಹೆಚ್ಚಿನ ಪ್ರಮಾಣದಲ್ಲಿ (ಸಾವಿರ ರೂ.ಗಳ ಲೆಕ್ಕದಲ್ಲಿ) ವಂತಿಗೆ ಕೇಳಲು ಪ್ರಯತ್ನಿಸುತ್ತಾರೆ. ಸಾಧ್ಯವಾಗದಿದ್ದರೆ ನಯ ವಂಚನೆಯಿಂದಾದರೂ ಗಳಿಸಿಯೇ ತೀರುತ್ತಾರೆ.

ಇವರು ಯಾರ ಹೆಸರಿನಲ್ಲಿ ಸಂಗ್ರಹಿಸುತ್ತಿದ್ದಾರೋ ಅವರು (ಒಂದು ಜನಾಂಗದ ಮಠಾಧೀಶರೊಬ್ಬರು) ಖಂಡಿತವಾಗಿ ಈ ರೀತಿ ಜನರಿಂದ ಕಿತ್ತುಕೊಂಡು ಬನ್ನಿ ಎಂದು ಹೇಳಿರಲಾರರು. ಆದರೆ ಈ ಸಂಗ್ರಹಕಾರರು ತಮ್ಮ ಹೆಸರನ್ನು, ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಈ ರೀತಿ ಮಾಡುತ್ತಿದ್ದಾರೆಂದೇ ಅನ್ನಿಸುತ್ತದೆ. ಸಮಾಜಕ್ಕೆ ಉಪಯೋಗವಾಗುವಂಥಾ ಕೆಲಸ ಮಾಡುವ ಯೋಗ್ಯತೆ ಇರುವ ಇವರುಗಳು ಅದರ ಕಡೆಗೆ ಅಲಕ್ಷ್ಯ ತೋರಿ, ಈ ರೀತಿಯ ಕೆಲಸಕ್ಕಿಳಿದಿರುವುದು ನಿಜಕ್ಕೂ ಶೋಚನೀಯ ಸಂಗತಿ.

ನಡೆಯಬೇಕಾದ ಸಾಮಾಜಿಕ, ಧಾರ್ಮಿಕ, ಕಾರ್ಯಗಳು ಎಲ್ಲರ ಸಂತೋಷದಿಂದ ನಡೆದರೆ ಸಮಾಜಕ್ಕೂ, ಜನತೆಗೂ ಒಳಿತು ಆದರೆ ದಾಕ್ಷಿಣ್ಯವಂತ ಬಡ ಜನರಿಗೆ ತೊಂದರೆ ಕೊಟ್ಟು ಇಂತಹ ಕಾರ್ಯ ನಡೆಸಿದರೆ ಒಳಿತಾಗುವುದಿಲ್ಲವೇನೋ ಎಂದು ನಾನು ಭಾವಿಸುತ್ತೇನೆ

–ಒಬ್ಬ 'ಮೂಕ', ಒಂದು 'ಮೂಗೂರು'
(ಅಗಳಗಂಡಿ ಸೀಮೆ)

'ಸಿಡಿದವಳು'— ಮತ್ತೊಂದು ಗರಿ

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ, ಯುವಜನ ಮೇಳಗಳಲ್ಲಿ ಮೊದಲ ಸ್ಥಾನ ಗಳಿಸಿದ್ದ, ರಮೇಶ್ ಬೇಗಾರ್ ನಿರ್ದೇಶನದ ನಾಟಕ 'ಸಿಡಿದವಳು' ಇದೀಗ ಕೆ. ಆರ್. ನಗರದಲ್ಲಿ ವಿಭಾಗ ಮಟ್ಟದಲ್ಲೂ ಮೊದಲ ಸ್ಥಾನ ಗಳಿಸಿ ರಾಜ್ಯಮಟ್ಟದಲ್ಲಿ ಮೈಸೂರು ವಿಭಾಗವನ್ನು ಪ್ರತಿನಿಧಿಸಲಿದೆ.

ಶೃಂಗೇರಿಯ ನವೋದಯ ಯುವತಿ ಮಂಡಳಿಯವರು ಅಭಿನಯಿಸಿದ ಈ ನಾಟಕ ಈ ತಾಲ್ಲೂಕಿನಿಂದ ರಾಜ್ಯ ಮಟ್ಟಕ್ಕೆ ಅರ್ಹತೆ ಗಳಿಸಿದ ಎರಡನೇ ನಾಟಕವಾಯಿತು. (ಮೊದಲನೆಯದು : ಕಳೆದ ವರ್ಷ ಕು। ಛಾಯಾ ನಿರ್ದೇಶನದ 'ನಿರ್ಮಲಾ').

ನಾಗತಿಹಳ್ಳಿ ಚಂದ್ರಶೇಖರರ ಕತೆಯನ್ನಾಳ್ವ ಈ ನಾಟಕದ ರೂಪಾಂತರ ಮತ್ತು ಸಂಭಾಷಣೆ ಮಂಗಳಾ ಅವರದು. ನಿರ್ವಹಣೆ–ಡಾ॥ ಎಲ್.ಎಂ. ಭಟ್, ಸಂಗೀತ–ಕೃಷ್ಣಮೂರ್ತಿ. ಪಾತ್ರವರ್ಗದಲ್ಲಿ ಸ್ವರ್ಣಾಂಬ, ಭಾಗ್ಯ, ರೇವತಿ, ಪ್ರೇಮಾ, ಅನಸೂಯ, ಲಕ್ಷ್ಮಿ, ರೇಣುಕಾ, ವಾಣಿಶ್ರೀ, ಶಾರದಾ ಕುಮಾರಿ, ಸವಿತಾ ಮುಂತಾದ ಪ್ರತಿಭಾವಂತರಿದ್ದಾರೆ

ಈ ನಾಟಕ ತಾ॥ ಮಟ್ಟದಲ್ಲಿ ಶ್ರೇಷ್ಠ ನಿರ್ದೇಶಕ ಶ್ರೇಷ್ಠ ನಟಿ ಪ್ರಶಸ್ತಿಗಳೊಂದಿಗೂ, ಜಿಲ್ಲಾ ಮಟ್ಟದಲ್ಲಿ ಶ್ರೇಷ್ಠ ನಿರ್ದೇಶಕ ಪ್ರಶಸ್ತಿಯೊಂದಿಗೂ, ವಿಭಾಗ ಮಟ್ಟದಲ್ಲಿ ಶ್ರೇಷ್ಠ ನಟಿ ಪ್ರಶಸ್ತಿಯೊಂದಿಗೂ ಮೊದಲ ಸ್ಥಾನವನ್ನು ದಕ್ಕಿಸಿಕೊಂಡಿದೆ.

● ಪಾಪಣ್ಣ

ಉಗಿ ಚಾಲಿತ ಪಂಪ್: ವರದಿಗೆ ಕೃತಜ್ಞತೆ

ಪ್ರಿಯರೆ,

ನಾವುಗಳು ಪ್ರಾಯೋಗಿಕವಾಗಿ ತಯಾರಿಸಿರುವ 'ಉಗಿ ಚಾಲಿತ ಪಿಸ್ಟನ್ ರಹಿತ ಪಂಪ್‌ಸೆಟ್' ಕುರಿತು ಹಾಗೂ ಕೊಪ್ಪದಲ್ಲಿ ನಡೆದ ಅದರ ಪ್ರಾತ್ಯಕ್ಷಿಕೆ ಕುರಿತು ನಿಮ್ಮ ೩ ೨.೯೧ ರ ಪತ್ರಿಕೆಯಲ್ಲಿ ವರದಿ, ವಿವರ ಪ್ರಕಟಿಸಿ, ಸಾರ್ವಜನಿಕರಿಗೆ ಈ ಪಂಪ್‌ಸೆಟ್‌ನ ಪರಿಚಯ ಮಾಡಿ ಕೊಟ್ಟಿರುವುದಕ್ಕೆ ನಾವುಗಳು ಕೃತಜ್ಞರು.

ಇಂಥ ಪರ್ಯಾಯ ಇಂಧನ ಮೂಲಗಳು ಹಾಗೂ ಪರ್ಯಾಯ ಶಕ್ತಿ ಯಂತ್ರಗಳಿಂದ ಬಳಕೆದಾರ ಮತ್ತು ತಯಾರಕರಿಬ್ಬರಿಗೂ ಉಪಯೋಗವಿರುವುದಲ್ಲದೆ ದೇಶದ ಇಂದಿನ ಅತಿ ತುರ್ತಿನ ಸಮಸ್ಯೆಯಾದ ಇಂಧನ ಉಳಿತಾಯದ ಆಂದೋಲನಕ್ಕೂ, ಇಂಧನದ ಕೊರತೆಯಿಂದ ಕಂಗಾಲಾದ ರೈತ ಸಮುದಾಯಕ್ಕೂ ನಿಮ್ಮ ಪತ್ರಿಕೆಯ ಈ ಬರಹದ ಕೊಡುಗೆ ಉಪಯುಕ್ತ.

ಇಂಥ ಪರ್ಯಾಯ ಶಕ್ತಿ ಯಂತ್ರಗಳಿಗೆ ಹಾಗೂ ಮಲೆನಾಡಿನ ಸಣ್ಣ ಕೈಗಾರಿಕೋದ್ಯಮಿಗಳಿಗೆ ಮುಂದೆಯೂ ಸಹ ನಿಮ್ಮಿಂದ ಇಂಥದೇ ಪ್ರೋತ್ಸಾಹವನ್ನು ನಿರೀಕ್ಷಿಸುತ್ತೇವೆ.

–ಎಚ್.ಆರ್.ಉಪೇಂದ್ರ, ಮಾಲಿಕರು, ಕಾಳಿಕಾಂಬ ಇಂಡಸ್ಟ್ರಿಯಲ್ ಪ್ರಾಡಕ್ಟ್ಸ್, ಟಿ. ಎಂ. ರಸ್ತೆ, ಹರಿಹರಪುರ. ಮತ್ತು

–ಆರ್ ನಾಗರಾಜ, ಮಾಲಿಕರು,
ಗಾಯತ್ರಿ ಎಂಜಿನಿಯರಿಂಗ್ ವರ್ಕ್ಸ್,
ಜಯಪುರ.

....ವಿವಾದ ಪಟ್ಟಭದ್ರ ಹಿತಾಸಕ್ತಿಗಳ ಸೃಷ್ಟಿ

(ಹಿಂದಿನ ಪುಟದಿಂದ)

ಸಮನ್ವಯಕಾರರಾಗಿದ್ದರು. ಭಾಷಣಗಳ ನಂತರ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಪ್ರಶ್ನೋತ್ತರ ನಡೆಯಿತು.

ಇದೇ ವಿವಾದ ಪುನಃ ಚುನಾವಣೆಯ ವೇಳೆ ಮರುಕಳಿಸುವುದು ಖಂಡಿತ. ಆಗ ಜನ ಅದಕ್ಕೆ ಗಮನ ಕೊಡದೆ, ಆಯಾ ರಾಜಕೀಯ ಪಕ್ಷಗಳು ಜನರ ಬದುಕಿನ ಬವಣೆ ಸುಧಾರಿಸಲು ಏನು ಮಾಡಿದ್ದಾರೆಂಬುದಾಗಿ ಅವರಿಗೆ ಪ್ರಶ್ನಿಸಬೇಕು ;

ಒಳ್ಳೆಯ ನಡವಳಿಕೆ ಎಂದರೆ "ನಮಗೆ ಯಾವುದರ ಸಹವಾಸವೂ ಬೇಡಪ್ಪ !" ಎಂದು ಹೊಣೆ ಜಾರಿಸಿಕೊಳ್ಳುವುದಲ್ಲ. ಕೆಡುಕು, ಕ್ರೌರ್ಯ, ಸುಳ್ಳುಗಳನ್ನು ವಿರೋಧಿಸಿ ಸತ್ಯ, ಸಾಮರಸ್ಯ, ಒಳಿತುಗಳನ್ನು ಪ್ರತಿಪಾದಿಸುವುದು ಮತ್ತು ಹರಡುವುದು ಅಗತ್ಯ ಈ ವಿವಾದದ ಬಗ್ಗೆ ಕೂಡ ಪ್ರತಿಯೊಬ್ಬ ಪ್ರಜ್ಞಾವಂತನೂ ಜನಸಾಮಾನ್ಯರಲ್ಲಿ ಸರಿಯಾದ ತಿಳುವಳಿಕೆ ಹರಡಲು ಯತ್ನಿಸಬೇಕು;

ಬೀದಿಗಿಳಿಯುವುದೆಂದರೆ ಘೋಷಣೆ ಕೂಗಿ, ಚಳುವಳಿ, ಮೆರವಣಿಗೆ ಮಾಡುವುದು ಮಾತ್ರ ಎಂದರ್ಥವಲ್ಲ. ಆರೋಗ್ಯವಾದ ವಿಶ್ವವಿದ್ಯಾಲಯದ ಬದುಕಿನಿಂದ ಈಚೆ ಬಂದು ಇಂಥ ಚರ್ಚೆ–ವಿಚಾರ ವಿನಿಮಯದ ಮೂಲಕ ಸೌಹಾರ್ದತೆ, ಅರಿವು ಬೆಳೆಸಲು ಯತ್ನಿಸುವುದೂ ಕೂಡ ಬೀದಿಗಿಳಿವಂತೆಯೇ;

ಬಿಜೆಪಿಯವರು ಮಾತ್ರವೇ ಕೋಮುವಾದಿಗಳು, ಉಳಿದ ಪಕ್ಷಗಳವರು ಅಲ್ಲ ಎಂದೇನಿಲ್ಲ. ಇವತ್ತಿನ ಬಹುತೇಕ ಎಲ್ಲ ಪಕ್ಷಗಳಲ್ಲೂ ಕೋಮುವಾದಿಗಳಿದ್ದಾರೆ. ಆದರೆ ಒಂದು **'ಧರ್ಮ'ವನ್ನೇ ನೇರವಾಗಿ ತಮ್ಮ ರಾಜಕೀಯದ ತಳಹದಿ ಎಂದು ಘೋಷಿಸಿಕೊಳ್ಳುವ ಬಿ.ಜೆ.ಪಿ., ಮುಸ್ಲಿಂ ಲೀಗ್‌ನಂಥ ಪಕ್ಷಗಳು ಇಡಿಯಾಗಿ ಕೋಮುವಾದಿ ಎನ್ನಿಸಿಕೊಳ್ಳುತ್ತವೆ.**

—ಇವೇ ಮುಂತಾದ ಹಲವು ವಿಚಾರಗಳು ಪ್ರಶ್ನೋತ್ತರದ ಜಿಜ್ಞಾಸೆಯಿಂದ ವ್ಯಕ್ತವಾದವು

ಬಿ.ಜೆ.ಪಿ., ವಿ.ಹಿಂ.ಪ., ಆರೆಸೆಸ್‌ಗಳ ಹೆಸರು ಎತ್ತಿ ಹೇಳಿದ್ದನ್ನೇ ಆಕ್ಷೇಪಿಸಿ ಹಾಗೂ ಭಾಷಣಕಾರರ ಕೆಲವು ವಿಚಾರಗಳನ್ನು ವಿರೋಧಿಸಿ ಕೆಲವರು ಸ್ವಲ್ಪ ಕಾಲ ಉದ್ರಿಕ್ತರಾಗಿ ಕೂಗಾಡಿ ಸಭಿಕರ ಪ್ರತಿಭಟನೆಯ ನಂತರ ಹೊರ ನಡೆದದ್ದೂ ಆಯಿತು.

ಇಂಥ ವಿಚಾರ ಸಂಕಿರಣ ಏರ್ಪಡಿಸಲು ಸೂಕ್ತ ವೇದಿಕೆಯೊಂದು ಅಸ್ತಿತ್ವದಲ್ಲಿಲ್ಲದ್ದರಿಂದ, 'ಮುಂಜಾವು' ವಾರ ಪತ್ರಿಕೆ ಬಳಗ ಎಂಬ ಅಂಕಿತದಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕೊಪ್ಪ, ಶೃಂಗೇರಿ, ನ. ರಾ. ಪುರ ತಾ॥ಗಳಿಂದ ಒಂದು ನೂರು ಜನ ಆಸಕ್ತಿಯಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸಿರಿಮನೆ ನಾಗರಾಜ್ ಸ್ವಾಗತಿಸಿ, ಆ ನಾ. ಸೇರಿಗಾರ್ ವಂದಿಸಿದರು

ವೇದಿಕೆ ರಚನೆಗೆ ನಿರ್ಧಾರ

ಕಾರ್ಯಕ್ರಮದ ನಂತರ ಎಲ್ಲ ಪ್ರತಿನಿಧಿಗಳು ಒಂದು ಗಂಟೆಗೂ ಹೆಚ್ಚು ಹೊತ್ತು ಚರ್ಚಿಸಿ, ಜಾತಿ–ಮತ ದ್ವೇಷ; ತಾರತಮ್ಯ, ಮೂಢ ನಂಬಿಕೆ, ದೈವ–ಧರ್ಮಗಳ ಹೆಸರಿನ ಶೋಷಣೆ. ಇವುಗಳನ್ನೊಪ್ಪದ ಪ್ರಗತಿಪರ ಆಲೋಚನೆಯ ಒಂದು ವೇದಿಕೆ ರಚಿಸಲು ನಿರ್ಧರಿಸಿದರು ಇದರ ರೂಪುರೇಷೆಗಳನ್ನು ಸಿದ್ಧಪಡಿಸಲು ಐವರು ಸದಸ್ಯರನ್ನು ಸಭೆ ನೇಮಿಸಿತು. ಜೀವವಿಮಾ ನಿಗಮದ ಎಸ್.ಎಸ್. ಭಟ್ ಹಂಗಾಮಿ ಸಂಚಾಲಕರಾಗಿ ನೇಮಕಗೊಂಡರು. ○

ಹಾಲು ಉತ್ಪಾದಕರ ಮತ್ತು ಹಾಲು ಸಂಗ್ರಹಣಾ ವ್ಯವಸ್ಥೆಯ ಸಮಸ್ಯೆ ಬಗೆಹರಿಸುವ ಸಲುವಾಗಿ ಜಿಲ್ಲಾಧಿಕಾರಿಗಳಿಂದ ಸಭೆ

ಬಾಳೆಹೊನ್ನೂರು ಹಾಲು ಶೀತಲೀಕರಣ ಕೇಂದ್ರದ ವಿಸ್ತರಣಾಧಿಕಾರಿಗಳು, ಹಾಲು ಉತ್ಪಾದಕರ ಸಹಕಾರಿ ಸಂಘಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರು, ಹಾಲು ಉತ್ಪಾದಕರು, ಬ್ಯಾಂಕಿನ ಅಧಿಕಾರಿಗಳು ಮುಂತಾದವರೊಡಗೂಡಿ ಜ. ೩೧ರಂದು ಕೊಪ್ಪ ಪುರಭವನದಲ್ಲಿ "ಹಾಲು ಉತ್ಪಾದಕರ ಸಹಕಾರ ಸಂಘಗಳು ಬೇಕೆ–ಬೇಡವೆ" ಎಂಬ ಬಗ್ಗೆ ಚರ್ಚೆ ನಡೆಯಿತು. ಜಿಲ್ಲಾಧಿಕಾರಿ ಡಾ|| ಸುಬ್ರಮಣ್ಯರವರ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಕೊಪ್ಪ ಮತ್ತು ನರಸಿಂಹರಾಜಪುರ ತಹಸೀಲ್ದಾರರು, ಹಾಸನ ಹಾಲು ಉತ್ಪಾದಕರ ಒಕ್ಕೂಟದ ಆಡಳಿತ ನಿರ್ದೇಶಕ ರೇವಣ್ಣ, ಜಿಲ್ಲಾ ಲೀಡ್ ಬ್ಯಾಂಕ್ ಆಡಳಿತಾಧಿಕಾರಿ ರಾಮಸ್ವಾಮಿ ಹಾಗೂ ಕೊಪ್ಪ ಮತ್ತು ಸುತ್ತಲಿನ ಮಂಡಲ ಪ್ರಧಾನರುಗಳು ಹಾಜರಿದ್ದರು.

ಬಾಳೆಹೊನ್ನೂರಿನ ಹಾಲು ಶೀತಲೀಕರಣ ಕೇಂದ್ರದಿಂದ ಈಗ ನಡೆಯುತ್ತಿರುವ 'ಮಿಲ್ಕ್ ರೂಟ್' ವ್ಯವಸ್ಥೆಯಲ್ಲಿ ಕೆಲವು ಲೋಪ ದೋಷಗಳನ್ನು ಸರಿಪಡಿಸಿದರೆ ಮಿಲ್ಕ್ ರೂಟ್ ಹಾಗೂ ಹಾಲು ಉತ್ಪಾದಕ ಸಂಘ ಸಂಸ್ಥೆಗಳು ಸರಿಯಾಗಿ ನಡೆಯಬಹುದು ಎಂದು ಸಭಿಕರು ಜಿಲ್ಲಾಧಿಕಾರಿಗಳ ಪ್ರಸ್ತಾಪಕ್ಕೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳು ಹೈನು ಉದ್ಯಮದಿಂದಲೇ ಜೀವನ ಸಾಗಿಸಬಯಸುವ ಬಡವರಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಿ ಅವರಿಗೆ ಸಾಲ–ಸೌಲಭ್ಯ ಕೊಡಿಸುವ ಆಶ್ವಾಸನೆ ನೀಡಿದರಲ್ಲದೆ, ಈಗ ಸಂಜೆಯ ಪಾಳಿಯಲ್ಲಿ ಹಾಲು ಸಂಗ್ರಹಣೆ ನಿಂತಿರುವ ಅಡ್ಡಗದ್ದೆ, ಅಸಗೋಡು, ಹರಿಹರಪುರ, ಉತ್ತಮೇಶ್ವರ, ಆಗಳಗಂಡಿ ಮತ್ತು ಬಾಳೆಹೊನ್ನೂರು— ಈ ೬ ಸಂಘಗಳಿಂದ ಸಂಜೆಗೆ ಕನಿಷ್ಠ ೨೦೦ ಲೀಟರು ಹಾಲು ಸಂಗ್ರಹಣೆ ಮಾಡುವುದಾದರೆ ಶೀಘ್ರದಲ್ಲೇ ಸಂಜೆಯ ಹಾಲು ಸಂಗ್ರಹಣೆಯನ್ನು ಪುನಃ ಪ್ರಾರಂಭಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು:

೧) ಈ ಆಯ್ದ ಆರು ಸಂಘಗಳಿಂದ ಒಟ್ಟು ಒಬ್ಬ ಮುಖ್ಯಸ್ಥನನ್ನು ನೇಮಕ ಮಾಡಿ ಅವನು ಪ್ರತಿ ತಿಂಗಳೂ ಈ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಚಟುವಟಿಕೆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಿಳಿಸುವುದು;

೨) ಎಲ್ಲಾ ಸಂಘಗಳಿಗೂ ಹಸಿ ಹುಲ್ಲಿನ ಬಿತ್ತನೆಯನ್ನು ಅರಣ್ಯ ಇಲಾಖೆ ಒದಗಿಸಲು ಅವಕಾಶವಿರುವುದರಿಂದ, ಈ ಇಲಾಖೆಯೊಂದಿಗೆ ಪ್ರತಿ ಸಂಘವೂ ಸಂಪರ್ಕವಿರಿಸಿಕೊಂಡಿರುವುದು;

೩) ಕೆಎಂಎಫ್‌ನಲ್ಲಿರುವ ಕೆಲವು ಸಮಸ್ಯೆಗಳನ್ನು ಬಗೆಹರಿಸುವುದು;

೪) ಎರಡೂವರೆ ಲೀಟರ್ ಹಾಲನ್ನು ಸಂಘಕ್ಕೆ ಹಾಕಿದಲ್ಲಿ ಒಂದು ಕಿಲೊ 'ನಂದಿನಿ' ಪಶು ಆಹಾರ ಕೊಡುವ ವ್ಯವಸ್ಥೆ. (ಈ ಹಿಂದೆ ಕೆಲವು ಮಧ್ಯಮ ರೈತರು ಸಂಘದಿಂದ ಪಶು ಆಹಾರ ಕೊಂಡು ಹಣವನ್ನು ಮರು ಪಾವತಿಸದೆ ಇರುವುದರಿಂದ);

೫) ಸಂಘದಿಂದ ಯಾವುದೇ ಕಡಿತಗಳಿದ್ದಲ್ಲಿ ಅವನ್ನು ಒಂದೇ ಬಾರಿಗೆ ಮುರಿಯದೆ ತಿಂಗಳಿಗೆ ಸಮಾನ ಕಂತಿನಲ್ಲಿ ಕಡಿತಗೊಳಿಸುವ ವ್ಯವಸ್ಥೆ ;

೬) ಪ್ರತಿ ಸಂಘಕ್ಕೆ ವಾರಕ್ಕೊಮ್ಮೆ ವಿಭಾಗೀಯ ಅಧಿಕಾರಿಗಳ ಭೇಟಿ ;

೭) ಈ ಆರು ಸಂಘಗಳಿರುವ ಊರಿನ ಬ್ಯಾಂಕ್ ಶಾಖಾಧಿಕಾರಿಗಳನ್ನು ಸಂಪರ್ಕಿಸಲು ಈಗಾಗಲೇ ಹೋಗಿರುವ ಜಿಲ್ಲಾ ಮುಖ್ಯ ಬ್ಯಾಂಕ್ ಅಧಿಕಾರಿಗಳು ಸಂಘದ ಸದಸ್ಯರ ಮತ್ತು ಬ್ಯಾಂಕಿನ ಸಂಬಂಧವನ್ನು ಪರಿಶೀಲಿಸಿ, ಹೊಸ ಸಾಲ ನೀಡುವ ಭರವಸೆ ;

೮) ಹೈನು ಉದ್ಯಮದ ಬಗ್ಗೆ ತರಬೇತಿ ವ್ಯವಸ್ಥೆ.

ಕೆ. ಎಂ. ಎಫ್ ಹಾಸನದ ಆಡಳಿತ ನಿರ್ದೇಶಕ ರೇವಣ್ಣ ಮಾತನಾಡುತ್ತಾ, ಈಗ ಈ ರೂಟಿನಲ್ಲಿ ಹಾಲಿನ ಉತ್ಪಾದನೆ ಮತ್ತು ಗುಣ ಮಟ್ಟ ಕಡಿಮೆ ಆಗಿದ್ದು, ಮಧ್ಯಮ ರೈತರು ಹೆಚ್ಚು ಪಶು ಆಹಾರ ಕೊಂಡು ಹಣವನ್ನು ಮರು ಪಾವತಿಸದೇ ಇರುವುದರಿಂದ ಸಂಘಕ್ಕೆ ಆರ್ಥಿಕ ನಷ್ಟ ಉಂಟಾಗಿದೆ ಎಂದರಲ್ಲದೆ ಮುಂದೆ ಈಗಿರುವ ಹಾಲಿನ ದರವನ್ನು ಲೀಟರಿಗೆ ೩೦ ಪೈಸೆ ಹೆಚ್ಚಿಸುವುದರಿಂದ ಮತ್ತು ಮಾರುಕಟ್ಟೆ ವ್ಯವಸ್ಥೆ ಸರಿಯಾಗಿ ನಡೆಯುವುದರಿಂದ ಹಾಲು ಉತ್ಪಾದಕರು ಸಂಘಕ್ಕೆ ಹೆಚ್ಚು ಹಾಲನ್ನು ಸರಬರಾಜು ಮಾಡಲು ವಿನಂತಿ ಮಾಡಿದರು.

ಇಂತಹುದೇ ಸಭೆಯನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮಾರ್ಚ್ ಮೊದಲ ವಾರ ಬಾಳೆಹೊನ್ನೂರಿನಲ್ಲೂ ಕರೆಯಲಾಗಿದೆ. (ವರದಿ: ಜೆ. ಎಸ್. ಶ್ರೀನಿಧಿ)

ಹರಿಹರಪುರದಲ್ಲೊಂದು ಮಧುರ 'ಭಾವ ಸಂಜೆ'

ಹರಿಹರಪುರದ ರಾಷ್ಟ್ರೋತ್ಥಾನ ಬಳಗದವರು ಫೆ. ೪ ರಂದು ಏರ್ಪಡಿಸಿದ್ದ 'ಭಾವ ಸಂಜೆ' ಸುಮಧುರವಾಗಿ ಮೂಡಿ ಬಂದಿತು.

ತಮ್ಮ ಸುಶ್ರಾವ್ಯ ಕಂಠದಿಂದ ಸಭಿಕರನ್ನು ಮುದಗೊಳಿಸಿದ ಆಕಾಶವಾಣಿ ಕಲಾವಿದರುಗಳಾದ ಕೆ. ಎಂ. ರಾಘವೇಂದ್ರ, ಕಿರಣಕೆರೆ ಮತ್ತು ಬೆಂಗಳೂರಿನ ಶ್ರೀಮತಿ ಪದ್ಮಾ ಗುರುರಾಜ್ ಇವರಿಗೆ ಮತ್ತೊಬ್ಬ ಆಕಾಶವಾಣಿ ಕಲಾವಿದ ಶ್ರೀಪಾದ (ಆರ್ಗನ್) ಮತ್ತು ನವ ಕಲಾವಿದ ರಮಾಕಾಂತ (ಮೃದಂಗ) ಉತ್ತಮ ಹಿಮ್ಮೇಳ ಒದಗಿಸಿದರು.

● ಜೆ. ಎಸ್. ಶ್ರೀನಿಧಿ.

ಸೌದೆ ಅಭಾವ ನೀಗಲು ಬಿಜೆಪಿ ನಿಯೋಗದ ಆಗ್ರಹ

ಕೊಪ್ಪ : ಇಲ್ಲಿ ಈಚೆಗೆ ಹಲವು ವಾರಗಳಿಂದ ಉಂಟಾಗಿರುವ ಸೌದೆ ಅಭಾವವನ್ನು ನೀಗಿಸುವಂತೆ ಬಿ. ಜೆ. ಪಿ. ನಿಯೋಗವೊಂದು ಈಚೆಗೆ ವಿಭಾಗ ಅರಣ್ಯಾಧಿಕಾರಿಗಳ ಕಛೇರಿಗೆ ತೆರಳಿ ಒತ್ತಾಯಿಸಿತು.

ಸೀಮೆಎಣ್ಣೆ ಮತ್ತು ಅಡಿಗೆ ಅನಿಲ ಕೂಡ ಈಗ ಅಭಾವವಾಗಿದ್ದು, ಗ್ರಾಮಾಂತರದ ಈ ಸೌದೆ ಡಿಪೋದಲ್ಲಿ ಸಾಕಷ್ಟು ಸೌದೆ ದಾಸ್ತಾನಿಲ್ಲದಿದ್ದರೆ ಅಕ್ರಮಗಳಿಗೆ ದಾರಿಯಾಗುತ್ತದೆ ಎಂದು ನಿಯೋಗ ತಿಳಿಸಿತು.

ರಾ|| ಸೇವಾ ಕಾರ್ಯಕರ್ತರ ಹುದ್ದೆಗೆ ಕರೆ

ಚಿಕ್ಕಮಗಳೂರು : ೧೯೯೧–೯೨ ನೇ ಸಾಲಿಗೆ ಇಲ್ಲಿನ ನೆಹರು ಯುವ ಕೇಂದ್ರದಲ್ಲಿ ಖಾಲಿ ಇರುವ ರಾಷ್ಟ್ರೀಯ ಸೇವಾ ಕಾರ್ಯಕರ್ತರ ಹುದ್ದೆಗೆ ಅರ್ಹ ಪದವೀಧರ ಯುವಕ/ಯುವತಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳ ವಯಸ್ಸು ದಿನಾಂಕ ೧–೪–೯೧ಕ್ಕೆ ೩೩ ರೊಳಗಿದ್ದು (ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ೨ ವರ್ಷ ರಿಯಾಯ್ತಿಯಿದೆ) ಕಾಲೇಜು ದಿನಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆ/ ಎನ್ ಸಿ.ಸಿ.ಯಲ್ಲಿ ಭಾಗವಹಿಸಿದವರಾಗಿ ಯುವಜನ ಚಟುವಟಿಕೆಯಲ್ಲಿ ಆಸಕ್ತಿಯುಳ್ಳವರಾಗಿರಬೇಕು.

ಆಸಕ್ತಿಯುಳ್ಳ ಜಿಲ್ಲೆಯ ಪದವೀಧರ ಯುವಕ / ಯುವತಿಯರು ನಿಗದಿಪಡಿಸಿದ ಅರ್ಜಿ ನಮೂನೆಯನ್ನು ನೆಹರು ಯುವ ಕೇಂದ್ರದ ಕಾರ್ಯಾಲಯದಿಂದ ಪಡೆದು ಅವಶ್ಯವಿರುವ ಮಾಹಿತಿಗಳ ಜೊತೆಗೆ ೨೮–೨–೯೧ ರೊಳಗೆ ಅದೇ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಆಯ್ಕೆಯಲ್ಲಿ ಪರಿಶಿಷ್ಟ ಜಾತಿ / ಪಂಗಡದವರಿಗೆ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ತಿಂಗಳಿಗೆ ೪೫೦ ರೂ. ಸಂಭಾವನೆ ನೀಡುವುದರ ಮೂಲಕ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸಲು ನಿಯೋಜಿಸಲಾಗುವುದು. ಆಯ್ಕೆಯಲ್ಲಿ ಆಯಾಯ ತಾಲ್ಲೂಕಿನ ಅಭ್ಯರ್ಥಿಗಳಿಗೇ ಆದ್ಯತೆ.

ಕೊಲ್ಲಿ ಯುದ್ಧಕ್ಕೆ ಪ್ರತಿಭಟನೆ

ಕೊಪ್ಪ : ಕೊಲ್ಲಿ ಯುದ್ಧವನ್ನು ನಿಲ್ಲಿಸುವಂತೆ ಆಗ್ರಹಿಸಿ ಇಲ್ಲಿನ ವಿಮಾ ನೌಕರರ ಸಂಘದ ಸದಸ್ಯರು ಫೆ. ೧೧ ರಂದು ಯುದ್ಧ ವಿರೋಧಿ ಮತ್ತು ವಿಶ್ವ ಶಾಂತಿ ಪರವಾದ ಘೋಷಣೆಗಳೊಂದಿಗೆ ಕಛೇರಿ ಆವರಣದಲ್ಲಿ ಮೌನ ಪ್ರದರ್ಶನ ನಡೆಸಿದರು. ನೌಕರರ ಅಖಿಲ ಭಾರತ ಸಂಘದ ಕರೆಯ ಮೇರೆಗೆ ಈ ಕಾರ್ಯಕ್ರಮ ನಡೆಯಿತು.

ಬ್ರೇಕ್, ಡಿಸ್ಕೊ ಮತ್ತು ಭರತ ನಾಟ್ಯ ಸ್ಪರ್ಧೆ

ಕೊಪ್ಪ : ಇಲ್ಲಿನ ಡೈಮಂಡ್ಸ್ ಯೂತ್ ಕ್ಲಬ್‌ನ ೫ನೇ ವಾರ್ಷಿಕೋತ್ಸವದ ಅಂಗವಾಗಿ ಫೆ ೨೭ ಮತ್ತು ೨೮ ರಂದು ಇಲ್ಲಿನ ಪುರಸಭಾ ರಂಗ ಮಂದಿರದಲ್ಲಿ ಯುವಕರ ಬ್ರೇಕ್ ಡ್ಯಾನ್ಸ್, ಯುವತಿಯರ ಡಿಸ್ಕೊ ಮತ್ತು ಯುವಕ–ಯುವತಿಯರ ಭರತ ನಾಟ್ಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಪ್ರವೇಶಧನ: ಬ್ರೇಕ್ ಡ್ಯಾನ್ಸ್ ೨೦ ರೂ; ಡಿಸ್ಕೊ ೧೫ ರೂ. ಮತ್ತು ಭರತ ನಾಟ್ಯಕ್ಕೆ ೨೦ ರೂ. ಇದ್ದು, ಪ್ರವೇಶ ಸಲ್ಲಿಸಲು ಕೊನೇ ದಿನ ೨೬–೨–೯೧.

೧೫ ವರ್ಷಕ್ಕೆ ಮೇಲ್ಪಟ್ಟವರಿಗೆ ಮಾತ್ರ ಅವಕಾಶವಿದ್ದು, ಸ್ಪರ್ಧಿಗಳು ತಮಗೆ ಬೇಕಾದ ಕ್ಯಾಸೆಟ್‌ಗಳನ್ನು ತಾವೇ ತರಬೇಕು ಎಂದು ಪ್ರಕಟಣೆ ತಿಳಿಸಿದೆ.

ಪದಾಧಿಕಾರಿಗಳು

ಶೃಂಗೇರಿ : ಇಲ್ಲಿನ ಶಾರದಾ ಯುವಕ ಕಲಾ ಸಂಘದ ನೂತನ ಪದಾಧಿಕಾರಿಗಳು: ವೆಂಕಟೇಶ ಹೆಗ್ಡೆ (ಅಧ್ಯಕ್ಷ), ಎಸ್. ನಿಸಾರ್ (ಉಪಾಧ್ಯಕ್ಷ), ಮುತ್ತು ಶೆಟ್ಟಿ (ಕಾರ್ಯದರ್ಶಿ), ಅಶೋಕ್ (ಖಜಾಂಚಿ) ಮತ್ತು ಎಸ್. ವಿ ರಾಮಚಂದ್ರ ಭಟ್ಟ, ಕಾ. ನಾ. ಶಿವಶಂಕರ್ (ಸಲಹೆಗಾರರು).

ಅಡಿಕೆ ಧಾರಣೆ

ಶಿವಮೊಗ್ಗ ೧೫-೨-೯೧

ಸರಕು : ೫೪೦೯–೫೮೫೧

ಬೆಟ್ಟೆ : ೪೮೫೯–೫೨೭೫

ಗೊರಬಲು : ೨೮೮೯–೩೨೦೦

ಸಾಗರ ೧೫-೨-೯೧

ಆಪಿ : ೫೭೯೯–೬೦೯೭

ರಾಶಿ ಇಡಿ : ೪೫೯೯–೪೮೪೨

ಚಾಲಿ : ೪೨೯೦–೪೪೪೯

ಸಿಪ್ಪೆ ಗೋಟು : ೧೬೮೯–೨೧೭೨

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ